ನಿಂಗಪ್ಪ ಕೊಂಚ ಕಸಿವಿಸಿಗೊಂಡರೂ, ತಾನೇ ಎಲ್ಲೋ ಮರೆತು ಹಿಂದಿನ ದಿನ ಸಂಜೆ ಬೀಗ ಹಾಕದೆ ಹೋಗಿರಬೇಕೆಂದು ತನ್ನ ಮರೆವಿಗೆ ಸಮಾಧಾನ ಹೇಳುತ್ತಲೇ, ಎದೆಯ ಸಣ್ಣ ಢವಗುಟ್ಟುವಿಕೆಯನ್ನು ಗಮನಿಸಿದ. ಸ್ವಲ್ಪ ಅಧೈರ್ಯದಿಂದಲೇ ತುಂಬಿನಿಂತ ಹೊಲದಲ್ಲಿ ತನ್ನ ಕಫ ಕ್ಯಾಕರಿಸಿಕೊಳ್ಳುತ್ತ ಜೋರುಧ್ವನಿ ಮಾಡಿದ. ಹೊಲದಲ್ಲಿ ಸಾಕಿದ ನಾಯಿಗಳೆರಡು ತನ್ನೊಡೆಯ ಬಂದ ಸದ್ದನ್ನ ಗಮನಿಸಿ ಓಡೋಡಿ ಬಾಲ ಬಡಿದುಕೊಂಡು ಬಂದು ಅಡರತೊಡಗಿದವು. ನಿಂಗಪ್ಪನಿಗೆ ಇಂದ್ಯಾಕೋ ಸ್ವಲ್ಪ ಬೇರೆ ಥರವೇ ಅನ್ನಿಸಲು ಶುರುವಾಯಿತು. ದೌಡಾಯಿಸಿ ದನದ ಕೊಟ್ಟಿಗೆಯ ಬಳಿ ಬಂದ. ಕೊಟ್ಟಿಗೆ ಬಾಗಿಲಿಗೆ ಹಾಕಿದ ಬೀಗ ಚಿಲಕದ ಸಮೇತ ಸೊಟ್ಟಬಾಯಿ ಮಾಡಿ ನೆಗ್ಗಿಕೊಂಡು ಮುರಿದು ಬಿದ್ದಿತ್ತು. ಕೊಟ್ಟಿಗೆ ಬಟಾಬಯಲಾಗಿ ಗೌವ್ವನೆ ಭೀಕರತೆಯನ್ನು ಮಾರ್ದನಿಸುತ್ತಿತ್ತು. ಆರೇಳು ದಿನದ ಕರು ನಿಂಗಪ್ಪನ ಒಳಬರುವಿಕೆಗೆ ಅಂಬೋ.. ಅಂಬೋ.. ಎಂದು ತನ್ನ ತಾಯಿಗಾಗಿ ಗೋಗರೆಯುತ್ತಿತ್ತು. ಕಟ್ಟುಮಸ್ತಾಗಿದ್ದ ಜೋಡೆತ್ತುಗಳು ಕಮ್ಮಿಯೆಂದರೂ ಐವತ್ತೈದು ಸಾವಿರ ಬೆಲೆಬಾಳುವಂಥವು, ಜೊತೆಗೊಂದು ಆಕಳೂ ಕಾಣದಾಗಿ ನಿಂಗಪ್ಪನ ಕಾಲು ನಡುಗತೊಡಗಿದವು. ಹೊಟ್ಟೆಗೆ ಸಾಲದೇ ಕಣ್ಣಿ ಕಿತ್ತುಕೊಂಡು ಎಂದೂ ಮೇಯಲು ಹೋದವಲ್ಲಾ ಈ ದನಗಳು. ಇಂದ್ಯಾಕೋ ಎಲ್ಲ ತಳಬುಡವಾಗಿ ಕಂಡಿತು. ಸೂರಿನ ಗೂಟಕ್ಕಿದ್ದ ಬಾರುಕೋಲು ಹಿಡಿದು ನಿಂಗಪ್ಪ 'ಹೇ ರಾಮು... ಗೌರಿ ಬಾಬಾ...' ಎಂದು ಕೂಗುತ್ತಾ ಹೊರಬಂದ. ದನಗಳು ತಪತಪ ಸಗಣಿ ಗಂಜಲ ಹಾಕಿಕೊಂಡು ಹೋದ ಮಾರ್ಗವನ್ನು ಗಮನಿಸಿದ. ನಾಯಿಗಳೆರಡು ವಿಚಿತ್ರವಾಗಿ ಅರಚುತ್ತಾ ಗರ್ರ್ಯಾಡತೊಡಗಿದವು. ಆಳೆತ್ತರ ಬೆಳೆದ ಮೆಕ್ಕೆಜೋಳದ ಹೊಲದೊಳಕ್ಕೆ ದನಗಳು ನುಗ್ಗಿದಂತೆ ಬೆಳೆ ಮುರಿದು ನೆಲಕಚ್ಚಿ ಬಿದ್ದದ್ದನ್ನು ನಿಂಗಪ್ಪ ಗಮನಿಸಿ ಧಾವಿಸಿದ. ನಾಯಿಗಳೂ ಆ ದಾರಿಗುಂಟ ಮುಂದೆಮುಂದೆ ಓಡಿದವು. ದನಗಳ ಹೆಜ್ಜೆ ಗುರುತು ಹಿಡಿದು 'ಬಾ... ಬಾ... ಗೌರಿ ರಾಮು... ಬಾಬಾ...' ಎಂದು ಕೂಗುತ್ತಾ ಓಡತೊಡಗಿದ. ಹೊಲದ ಬದು ಮುಗಿದರೂ ದನಗಳ ಹೆಜ್ಜೆ ಗುರುತುಗಳು ಮಾತ್ರ ತನ್ನ ಹೊಲದ ಬದು ದಾಟಿ ಹೋಗಿದ್ದವು. ಅದನ್ನು ಹಿಂಬಾಲಿಸಿ ಸುಮಾರು ಎರಡು ಕಿ.ಮೀ ಓಡಿದ. ಮುಂದೆ ಆ ಹೆಜ್ಜೆ ಗುರುತುಗಳು ಡಾಂಬರು ರೋಡಿನಿಂದಾಗಿ ಮಾಯವಾದವು. ನಿಂಗಪ್ಪ ಕುಸಿದು ಬಿದ್ದ. ಇಪ್ಪತ್ತೈದು ವರ್ಷಗಳಿಂದ ತನ್ನ ಹೊಲದಲ್ಲಿ ಒಂದು ಹುಲ್ಲುಕಡ್ಡಿ ಅಲ್ಲಾಡಿರಲಿಲ್ಲ. ದೌಡಾಯಿಸಿ ಮನೆಗೆ ಬಂದು ಹೆಂಡತಿಗೆ ವಿಷಯ ತಿಳಿಸಿದ. ಅಂಬವ್ವನ ಎದೆ ಧಸಕ್ಕೆಂದಿತು, ಆಕೆಗೆ ನಂಬಲಾಗಲಿಲ್ಲ, 'ಅಲ್ಲೇ ಎಲ್ಲರ ಕಣ್ಣೀ ಬಿಚ್ಕೆಂಡ ಹೋಗಿರಬಕು, ಹುಡುಕಿದ್ರಾ' ಎಂದೆಲ್ಲಾ ವಿಚಾರಿಸಿದಳು. 'ಹೂಂ ಎಲ್ಲಾ ಕಡೆ ಹುಡುಕಿದೆ. ಹೊಲದಾಗಾಸಿ ಮಕರಿ ಚಾನಲ್ ಕಡೆಗೆ ದನಾ ಹೋಗ್ಯಾವ' ಎಂದು ನಿಂಗಪ್ಪ ಉತ್ತರಿಸಿದ. ರೊಟ್ಟಿ ಬಡಿಯುತ್ತಾ ಕೂತ ಮಲ್ಲವ್ವಳಿಗೆ ಮಗಳು ಓಡಿ ಬಂದು, 'ಅವ್ವಾ ಹೊಲದಾಗಿನ ದನ ಕಳುವಾಗ್ಯಾವಂತ' ಎಂದು ಬಿಕ್ಕಳಿಸುತ್ತಾ ಕಣ್ಣೀರು ತಂದಳು. 'ಇದೇನ್ ಬಡಕಂತಪ್ಪಾ ಗ್ರಾಚಾರ' ಎಂದು ಮಲ್ಲವ್ವ ಒಲೆ ಬಿಟ್ಟು ಮೇಲೆದ್ದು ಕೈಗಂಟಿಕೊಂಡಿದ್ದ ರೊಟ್ಟಿ ಹಿಟ್ಟನ್ನು ಉಜ್ಜಿಕೊಳ್ಳುತ್ತಾ, ಸರಿಯಾಗ್ ನೋಡಿದ್ಯಾ ಇಲ್ಲಾ ತಮ್ಮಾ' ಎಂದು ಗಾಬರಿಯಿಂದ ಕೇಳಿದಳು. ಇತ್ತ ಒಲೆ ಮೇಲೆ ರೊಟ್ಟಿ ಸೀದು ಸುಟ್ಟು ಕರಕಲಾಗಿತು.

ಅಂಬವ್ವ, ತನ್ನ ತಾಯಿ ಮಲ್ಲವ್ವಳ ತಂಗಿ ಅಂದರೆ ತನ್ನ ಚಿಕ್ಕಮ್ಮನಿರುವ ಕೊಪ್ಪಕ್ಕೆ ಫೋನಾಯಿಸಿ ವಿಷಯ ತಿಳಿಸಿದಳು. ತಾನು ನಡೆದುಕೊಳ್ಳುತಿದ್ದ ಹೆಣ್ಣು ದೈವಕ್ಕೆ ವಿಷಯ ಮುಟ್ಟಸೆಂದೂ, ಅವರ ಮನೆಗೆ ಫೋನು ಕೊಟ್ಟು ಕಳಿಸುವಂತೆ ಕೇಳಿಕೊಂಡಳು. ದೈವವಾಣಿಗಾಗಿ ಜಂಗಮವಾಣಿ ಕಾಯುವ ಈ ಪರಿಯೇ ವಿಚಿತ್ರ. ಮೈದಾಳುತ್ತಿದ್ದ ಸರೋಜಮ್ಮಳಿಗೆ, 'ರಟ್ಟೆಳ್ಳಿಂದ ಅಂಬವ್ವ ಫೋನ್ ಮಾಡ್ಯಾಳ, ಮನ್ಯಾಗಿನ ದನಾ ಕಳು ಆಗ್ಯಾವಂತ' ಎಂದು ಸುದ್ದಿ ತಿಳಿಸಿ ಸುಮಿತ್ರಮ್ಮ ಫೋನು ಕೊಟ್ಟಳು.

